# ವಸಾಹತುಶಾಹಿ ಸೆರೆಮನೆ: ಹಿಂಸೆಯ ಪ್ರಯೋಗಗಳ ನಡುವೆ ಸೇಡಿನ ಕಿಡಿ!

‘20 ಮೇ 1944ರಂದು ನನ್ನ ಬಂಧನವಾಯಿತು. ಒಂದೆರಡು ಮೂರು ಸಲ ಬಾಂಬೆ ಪೊಲೀಸ್ ಹೆಡ್ ಕ್ವಾರ್ಟರ್ಸ್‌ಗೆ ಕರೆದೊಯ್ದಿದ್ದನ್ನು ಬಿಟ್ಟರೆ ಉಳಿದಂತೆ ಬಾಂಬೆಯ ಆರ್ಥರ್ ರೋಡ್ ಜೈಲಿನಲ್ಲೇ ನನ್ನನ್ನು ಬಂಧಿಸಿಟ್ಟಿದ್ದರು’

ಬಂಧನವಾದ ಕೆಲವು ತಿಂಗಳ ನಂತರ ಕೋರ್ಟಿನಲ್ಲಿ ತಮ್ಮ ಅನುಭವವನ್ನು ದಾಖಲಿಸುವ ಅವಕಾಶ ಮೊದಲ ಬಾರಿಗೆ ಲೋಹಿಯಾಗೆ ಸಿಕ್ಕಿತು.

ಒಂದು ತಿಂಗಳು ಮುಂಬೈ ಜೈಲಿನಲ್ಲಿದ್ದ ಲೋಹಿಯಾಗೆ ತಮ್ಮನ್ನು ಅಲ್ಲಿಂದ ಎಲ್ಲಿಗೆ ಕರೆದೊಯ್ದಿದ್ದಾರೆ ಎಂಬುದು ಗೊತ್ತಿರಲಿಲ್ಲ; ಅದು ಹೊರಲೋಕಕ್ಕೂ ಗೊತ್ತಿರಲಿಲ್ಲ. ತಾವಿರುವುದು ಲಾಹೋರ್ ಕೋಟೆಯ ಸೆರೆಮನೆ ಎಂಬುದು ಎಷ್ಟೋ ದಿನಗಳ ನಂತರ ಲೋಹಿಯಾಗೆ ತಿಳಿಯಿತು.

ಕೋರ್ಟಿಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಲೋಹಿಯಾ ಸೆರೆಮನೆಯ ನರಕದ ವಿವರಗಳನ್ನು ಕೊಟ್ಟರು:

‘22ನೇ ಜೂನ್ 1944ರಂದು ನನ್ನನ್ನು ಲಾಹೋರ್ ಸೆರೆಮನೆಗೆ ಕರೆದೊಯ್ದರು. ತಪಾಸಣಾ ಕೊಠಡಿಯಲ್ಲಿ ನನ್ನ ವಸ್ತುಗಳನ್ನು ಶೋಧಿಸಿದರು. ನನ್ನ ಪುಸ್ತಕ, ಪೆನ್ನು, ಪೇಪರು, ಶೇವಿಂಗ್ ಸೆಟ್ ಇತ್ಯಾದಿಗಳನ್ನು ವಶಪಡಿಸಿಕೊಂಡರು. ಬಂದೀಖಾನೆಯೊಳಕ್ಕೆ ಕರೆದುಕೊಂಡು ಹೋಗಿ ನನ್ನ ದೇಹ ತಪಾಸಣೆ ಮಾಡಿದರು.

ನಾನಿದ್ದ ಬಂದೀಖಾನೆಯೊಳಗೇ ಮಲಮೂತ್ರ ವಿಸರ್ಜನೆ, ಸ್ನಾನ ಎಲ್ಲವೂ ನಡೆಯಬೇಕಾಗಿತ್ತು. ನೆಲವೇ ಚರಂಡಿ. ಸರಳಿನ ಬಾಗಿಲಿನ ಕೆಳಗಿನಿಂದ ಅನ್ನದ ತಟ್ಟೆ ದೂಡಲು ಒಂದು ಸಣ್ಣ ಜಾಗ.

ಬಂದೀಖಾನೆಯ ಸೀಲಿಂಗ್‌ನಲ್ಲಿ ಪ್ರಖರ ಬೆಳಕಿನ ಬಲ್ಬು ರಾತ್ರಿಯಿಡೀ ಉರಿಯುತ್ತಿತ್ತು. ಯಾವ ಗಾಳಿಯೂ ಸುಳಿಯದಂಥ ಗೋಡೆ. ಸೊಳ್ಳೆಗಳ ದಾಳಿ. ಬಿಸಿಲಿನಿಂದ ಕಾದ ತಾರಸಿಯ ಧಗೆ. ಎರಡನೇ ದಿನದಿಂದಲೇ ಪೊಲೀಸರ ಬೈಗುಳ ಶುರುವಾಯಿತು. ‘ಆ ಮಗನೆ’, ‘ಈ ಮಗನೆ’ ಇತ್ಯಾದಿಗಳ ಜೊತೆಗೆ ‘ಹೇಡಿ’, ‘ನೀತಿಗೆಟ್ಟವನು’ ಮುಂತಾದ ಬೈಗುಳಗಳೂ ಶುರುವಾದವು. ನಡುನಡುವೆ ಸತ್ಯ ಎಂದರೇನು, ಉತ್ತಮ ನಡತೆ ಎಂದರೇನು ಎಂಬ ಬಗ್ಗೆ ಸುದೀರ್ಘ ಭಾಷಣಗಳು. ಒಬ್ಬ ಪೊಲೀಸನಂತೂ ಇದನ್ನೇ ಹೇಳಿ ಹೇಳಿ ತಲೆ ಚಿಟ್ಟು ಹಿಡಿಸಲು ಪ್ರಯತ್ನಿಸುತ್ತಿದ್ದ.

ಅವರು ಏನಾದರೂ ತಿನ್ನಲು ಕೊಟ್ಟರೆ ಅದು ಗಂಟಲಲ್ಲಿ ಇಳಿಯುತ್ತಲೇ ಇರಲಿಲ್ಲ. ನಾನೇನೂ ಉಪವಾಸ ಸತ್ಯಾಗ್ರಹ ಮಾಡುತ್ತಿರಲಿಲ್ಲ; ಆದರೆ ತಿನ್ನಲು ಹೋದರೆ ವಾಕರಿಕೆ ಬರುತ್ತಿತ್ತು. ಹಗಲಿನ ವೇಳೆ ಕೈಕೋಳ ತೊಡಿಸಿ ತಪಾಸಣೆಯ ಕೋಣೆಯಲ್ಲೇ ಇರಿಸುತ್ತಿದ್ದರು, ನಾಲ್ಕನೆಯ ದಿನ ನಡುರಾತ್ರಿ ಬಂದೀಖಾನೆಯಿಂದ ಪೊಲೀಸ್ ಕಚೇರಿಗೆ ಕರೆದೊಯ್ದರು.

ಆರನೆಯ ದಿನ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಮೂರು ಭರವಸೆ ಕೊಟ್ಟ: ನೀನು ಬಂದೀಖಾನೆಯ ಹೊರಗೆ ಸ್ನಾನ ಮಾಡಬಹುದು. ಊಟ ಕೊಡುವಾಗ ಬಂದೀಖಾನೆಯ ಬಾಗಿಲು ತೆರೆದಿರುತ್ತದೆ. ಕೆಟ್ಟ ಭಾಷೆ ಬಳಸುವುದನ್ನು ನಿಲ್ಲಿಸುತ್ತೇವೆ. ಅವನ ಭರವಸೆ ಕೇಳಿ ನಾನು ಊಟ ಮಾಡಲು ಶುರು ಮಾಡಿದೆ; ಆದರೆ ಅವನ ಮಾತನ್ನು ನಂಬಿದ್ದು ತಪ್ಪಾಯಿತೆಂದು ಆಮೇಲೆ ಗೊತ್ತಾಯಿತು.

ಆಮೇಲೆ ಸುಮಾರು ಹದಿನೈದು ದಿನ ಒಂಚೂರು ಉಸಿರಾಡುವಂತಿತ್ತು. ಆದರೂ ಕಚೇರಿಯಲ್ಲಿ ಕೈಕೋಳ ಹಾಕಿ ಕೂರಿಸುವುದು ಮುಂದುವರಿಯಿತು. ಈ ನಡುವೆ ನನ್ನನ್ನು ಹೊಗಳಿ ಪುಸಲಾಯಿಸುವ ಕಲೆಯನ್ನೂ ಬಳಸಲು ಶುರು ಮಾಡಿದರು; ಜೊತೆಗೆ, ಸೂಕ್ಷ್ಮವಾದ ಭಯೋತ್ಪಾದನೆಯೊ, ನಿನಗೆ ಮುಂದೇನು ಕಾದಿದೆಯೋ ಗೊತ್ತಿಲ್ಲ ಎಂದು ದಿಗಿಲು ಹುಟ್ಟಿಸುವುದೂ ಶುರುವಾಯಿತು.

ಕೋರ್ಟು, ಕಾನೂನುಗಳನ್ನು ಎದುರಿಸಲು ನಾನು ಸಂಪೂರ್ಣ ಸಿದ್ಧನಿದ್ದೆ. ‘ನಾನು ಏನೇನು ಮಾಡಿದ್ದೇನೋ, ಅದರಲ್ಲಿ ನನಗೆ ಸಂಬಂಧಿಸಿದ ಯಾವುದನ್ನೂ ನಿರಾಕರಿಸುವುದಿಲ್ಲ; ಬೇಕಾದರೆ ಆ ಕೃತ್ಯಗಳನ್ನೆಲ್ಲ ಮಾಡಿದ್ದೇನೆಂದು ಕೇಂದ್ರ ಸರ್ಕಾರಕ್ಕೆ ಬರೆದು ಕೊಡುತ್ತೇನೆ’ ಎಂದು ಕೂಡ ಹೇಳಿದೆ.

ಜುಲೈ ಮಧ್ಯ ಭಾಗದ ಹೊತ್ತಿಗೆ ಐದು ದಿನ, ಐದು ರಾತ್ರಿ ನನ್ನನ್ನು ನಿದ್ದೆ ಮಾಡಗೊಡಲಿಲ್ಲ. ಮಧ್ಯೆ ಅರ್ಧ ಗಂಟೆ ಮಾತ್ರ ಬಿಡುವು. ನಡುನಡುವೆ ಪೊಲೀಸರು ಭಾಷಣ ಬಿಗಿಯುವುದು, ಇಲ್ಲದಿದ್ದರೆ

